EPIP ಪ್ರದೇಶದಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡುವುದು

1780 (2135); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ಇ.ಪಿ.ಐ.ಪಿ. ಪ್ರದೇಶದಲ್ಲಿ ಸಮರ್ಪಕವಾಗಿ ವಿದ್ಯುತ್ತನ್ನು ಪೂರೈಸಲು ಸರ್ಕಾರ ಬದ್ಧವಾಗಿದೆಯೇ;

ಆ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹೊಸ ವಿದ್ಯುತ್ ಉಪ ವಿಭಾಗಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗುವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಮತ್ತು ಆ) E.P.I.P. ಪ್ರದೇಶವು ಸೇರಿದಂತೆ ಬೆಂಗಳೂರು ಮಹಾನಗರದ ಕೈಗಾರಿಕಾ ಪ್ರದೇಶಗಳ ವ್ಯಾಪ್ತಿಯಲ್ಲಿ 24 ಗಂಟೆಗಳು (24X7) ವಿದ್ಯುತ್ ಸರಬರಾಜು ವ್ಯವಸ್ಥೆಯಿದ್ದು, ಯಾವುದೇ ವಿದ್ಯುತ್ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಮುಂದುವರೆದು, E.P.I.P. ಯ ಸುತ್ತಮುತ್ತಲಿನ ಕೆಲವು ಭಾಗಗಳಲ್ಲಿ ತಾಂತ್ರಿಕ ತೊಂದರೆಯಿಂದ ಪೀಕ್ ಲೋಡ್ ಅವಧಿಯಲ್ಲಿ ಅನಿವಾರ್ಯವಾದಾಗ ಮಾತ್ರ ಸ್ವಲ್ಪ ಪ್ರಮಾಣದ ವಿದ್ಯುತ್ ಕಡಿತ ಮಾಡಲಾಗುತ್ತದೆ. ಇದನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಇ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿನ ಎಲ್ಲಾ ಕಛೇರಿಗಳ (ವಲಯ ವೃತ್ತ/ವಿಭಾಗ/ಉಪ ವಿಭಾಗ/ಶಾಖಾ ಕಛೇರಿ) ಕೆಲಸದ ಒತ್ತಡವನ್ನು ಅಧ್ಯಯನ ಮಾಡಲು ಮೆ॥ ನ್ಯಾಷನಲ್ ಪ್ರೊಡಕ್ಟವಿಟಿ ಕೌನ್ಸಿಲ್ (National Productivity Council) ಸಂಸ್ಥೆಗೆ ವಹಿಸಲಾಗಿದ್ದು, ಅಧ್ಯಯನ ಕಾರ್ಯ ಪೂರ್ಣಗೊಂಡು ವರದಿಯು ಪರಿಶೀಲನೆಯ ಹಂತದಲ್ಲಿರುತ್ತದೆ.

ಅಧ್ಯಯನ ವರದಿಯನ್ನು ಅಂಗೀಕರಿಸಿದ ನಂತರ ವೈಜ್ಞಾನಿಕವಾಗಿ ಪ್ರತಿ ಕಛೇರಿಯ ಕೆಲಸದ ಒತ್ತಡವನ್ನು ಪರಿಷ್ಕರಿಸಿ ನೂತನ ಕಛೇರಿಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

ಪಟ್ಟಣ ಪಂಚಾಯ್ತಿಯಾಗಿ ಮಾರ್ಪಡಿಸುವ ಬಗ್ಗೆ

1781 (1777); ಶ್ರೀ ಅಶೋಕ್ ಖೇಣಿ (ಬೀದರ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರ ಪೂರ್ಣವಾಗಿ ಗ್ರಾಮೀಣ ಪ್ರದೇಶ ಎಂದು ಗುರುತಿಸಿರುವುದು ಸರಿಯೇ;

ಆ) 2011ರ ಜನಗಣತಿ ಪ್ರಕಾರ, ಪಟ್ಟಣ ಪಂಚಾಯಿತಿಯಾಗಿ ಪರಿವರ್ತಿಸಲು ಸರ್ಕಾರದ ಹಂತದಲ್ಲಿ ಯೋಜನೆ ಇದೆಯೇ;

ಇ) ಹಾಗಿದ್ದಲ್ಲಿ, 2015-16ನೇ ಸಾಲಿನ ಬಜೆಟ್‌ನಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗುವುದೇ? (ಕ್ಷೇತ್ರ ಮುಂದುವರಿಯಲು)

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವುದೇ ಪ್ರದೇಶಗಳನ್ನು ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಈವರೆಗೆ ಗುರುತಿಸಿರುವುದಿಲ್ಲ.

ಆ) 2011ರ ಜನಗಣತಿಯನ್ವಯ ಹಾಗೂ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ವಯ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿನ ಅರ್ಹವಿರುವ ಗ್ರಾಮಗಳಿಗೆ ಪಟ್ಟಣ ಪಂಚಾಯತಿ ಅಥವಾ ಪುರಸಭೆಗಳನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.